ಆರೋಗ್ಯ ನಿರ್ಲಕ್ಷಿಸಿದರೆ ಅಪಾಯ ತಪ್ಪಿದ್ದಲ್ಲ

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಏರ್ಪಡಿಸಿರುವ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಆಯುಷ್ ಇಲಾಖೆಯ ಜಿಲ್ಲಾ ಅಧಿಕಾರಿ ಡಾ. ಸೀತಾಲಕ್ಷ್ಮೀ ಉದ್ಘಾಟಿಸಿ ಮಾತನಾಡಿದರು. ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪವತಿ ಇತರರಿದ್ದರು.

ಮೈಸೂರು: ನಾವು ಸೇವಿಸುವ ಆಹಾರ, ಕೆಲಸದಲ್ಲಿನ ಒತ್ತಡ ಹಾಗೂ ವಾತಾವರಣಗಳು ಮನುಷ್ಯನ ಆರೋಗ್ಯ ಕೆಡಲು ಪ್ರಮುಖ ಕಾರಣಗಳಾಗಿವೆ ಎಂದು ಆಯುಷ್ ಇಲಾಖೆಯ ಜಿಲ್ಲಾ ಅಧಿಕಾರಿ ಡಾ. ಸೀತಾಲಕ್ಷ್ಮೀ ಹೇಳಿದರು.

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಏರ್ಪಡಿಸಿರುವ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಕಂಡುಬರುವ ಶ್ರವಣ ದೋಷ, ಮಾತುಬಾರದಿರುವಿಕೆಯ ಬಗ್ಗೆ ಉದಾಸೀನ ಮಾಡಿದಲ್ಲಿ ಮುಂದೆ ಭೀಕರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಸಣ್ಣ ಮಕ್ಕಳಲ್ಲಿ ಕಂಡು ಬರುವ ಶ್ರವಣ ದೋಷ, ಮಾತು ಬಾರದಿರುವಿಕೆ ಸಮಸ್ಯೆಗಳಿಗೆ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಪೋಷಕರು ಈ ಸಮಸ್ಯೆಗಳಿರುವ ಮಕ್ಕಳನ್ನು ಕರೆತಂದು ಪರಿಹಾರ ಕಂಡುಕೊಳ್ಳುವಂತೆ ಹೇಳಿದರು.

ನಾವು ಸೇವಿಸುವ ಆಹಾರ ಮತ್ತು ವಾತಾವರಣದಲ್ಲಿನ ಹಲವು ಅಂಶಗಳೇ ಮನುಷ್ಯನ ಆರೋಗ್ಯದಲ್ಲಿ ಏರುಪೇರು ಉಂಟಾಗಲು ಪ್ರಮುಖ ಕಾರಣ. ಹೀಗಾಗಿ ಮೊದಲು ನಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಅವಶ್ಯ ಎಂದರು.

ಪೋಷಕರು ತಮ್ಮ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಪದಾರ್ಥಗಳೊಂದಿಗೆ ಹಾಲು, ವಿವಿಧ ಬಗೆಯ ಹಣ್ಣುಗಳನ್ನು ನೀಡುವ ಮೂಲಕ ತಮ್ಮ ಮಕ್ಕಳ ಆರೋಗ್ಯವೃದ್ಧಿ ಬಗ್ಗೆ ಗಮನಹರಿಸಬೇಕು ಎಂದು ಹೇಳಿದರು.

ಶಿಬಿರದ ಸಂಚಾಲಕರಾದ ಸಂಸ್ಥೆಯ ಎಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥ ಎಸ್.ಆರ್.ಶ್ರೀನಿವಾಸ್ ಮಾತನಾಡಿ, ಶ್ರವಣ ದೋಷವುಳ್ಳವರಿಗೆ ಅತ್ಯುತ್ತಮ ಗುಣಮಟ್ಟದ ಶ್ರವಣ ಸಾಧನಗಳು ಸಂಸ್ಥೆಯಲ್ಲಿ ಲಭ್ಯವಿದ್ದು, ಸಮಾಜದ ದುರ್ಬಲ ವರ್ಗದವರು ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತವಾಗಿ ಶ್ರವಣ ಸಾಧನಗಳನ್ನು ವಿತರಿಸಲಾಗುವುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪವತಿ ಮಾತನಾಡಿ, ಸಂಸ್ಥೆಯ ವತಿಯಿಂದ ಪ್ರತಿ ವರ್ಷ ಇಂತಹ ಶಿಬಿರ ಆಯೋಜಿಸುತ್ತಿದ್ದು, ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳುವಂತೆ ಹೇಳಿದರು.

Free hearing aid repair camp begins

SPECIAL CORRESPONDENT
MYSURU

A five-day free repair of hearing aids began at the All India Institute of Speech and Hearing here on Monday.

Seetha Lakshmi, District Ayush Officer, Mysuru, inaugurated the camp by receiving a hearing aid collected from an user. The camp has been organised by the Department of Electronics on the Naimisham campus.

In her address, Ms. Lakshmi spoke about health management in children with special needs and shared some health tips. Pushpavathi, Director, All India Institute of Speech and Hearing, in her presidential address, emphasised the need for organising such programmes every year and urged the public to make best use of the opportunity.

On the first day of the camp, about 100 persons got their hearing aids repaired. The camp will continue till January 31. Any individual with a hearing aid can walk in and get his/her hearing aid serviced and repaired.

Programme coordinator S.R. Srinivasa spoke.

A lamp being lit at the launch of a hearing aid repair camp at AIISH in Mysuru on Monday. • M.A. SRIRAM

Free hearing aids repair camp

Mysuru: The department of electronics of All India Institute of Speech and Hearing, Mysuru, began its five-day 'Free Hearing Aids Repair Camp' at its institute premises. The camp, will conclude on Friday. TNN

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದ ವತಿಯಿಂದ ಶ್ರವಣ ಸಾಧನಗಳ ಉಚಿತ ದುರಸ್ತಿ ಕಾರ್ಯಾಗಾರಕ್ಕೆ ಆಯುಷ್ ಇಲಾಖೆಯ ಜಿಲ್ಲಾ ಅಧಿಕಾರಿ ಡಾ.ಸೀತಾಲಕ್ಷ್ಮಿ ಅವರು ಸೋಮವಾರ ಚಾಲನೆ ನೀಡಿ ಮಾತನಾಡಿದರು

ಶ್ರವಣ ಸಾಧನ ದುರಸ್ತಿ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದ ವತಿಯಿಂದ ಶ್ರವಣ ಸಾಧನಗಳ ಉಚಿತ ದುರಸ್ತಿ ಕಾರ್ಯಾಗಾರವು ಸಂಸ್ಥೆಯಲ್ಲಿ ಸೋಮವಾರ ಆರಂಭವಾಯಿತು. ಈ ಕಾರ್ಯಾಗಾರವು ಜ. 31ರವರೆಗೆ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಇರಲಿದೆ.

ಕಳೆದ ವರ್ಷ ಈ ಶಿಬಿರದಲ್ಲಿ 650ಕ್ಕೂ ಹೆಚ್ಚು ಮಂದಿ ಶ್ರವಣ ಸಾಧನಗಳನ್ನು ದುರಸ್ತಿಪಡಿಸಿಕೊಂಡಿದ್ದರು. ಈ ಬಾರಿ 5 ಕಂಪನಿಗಳು ಇದರಲ್ಲಿ ಭಾಗವಹಿಸುತ್ತಿವೆ. ರಿಸೀವರ್, ಮೈಕ್ರೊಫೋನ್, ಆಂಪ್ಲಿಫೈಯರ್ ಬಿಟ್ಟು ಎಲ್ಲ ಬಿಡಿಭಾಗಗಳ ದುರಸ್ತಿಯನ್ನು ಉಚಿತವಾಗಿ ಮಾಡಲಾಗುತ್ತಿದೆ.

ಆಯುಷ್ ಇಲಾಖೆಯ ಜಿಲ್ಲಾ ಅಧಿಕಾರಿ ಡಾ.ಸೀತಾಲಕ್ಷ್ಮಿ, ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಎನ್.ಮನೋಹರ್, ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಎಸ್.ಆರ್.ಶ್ರೀನಿವಾಸ್ ಇದ್ದರು.

ಶ್ರವಣ ಸಾಧನಗಳ ಉಚಿತ ದುರಸ್ಥಿ ಶಿಬಿರ

ಮೈಸೂರು: ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ ವಿಭಾಗದ ವತಿಯಿಂದ ಜನವರಿ 27 ರಿಂದ 31 ರವರೆಗೆ 5 ದಿನಗಳ ಕಾಲ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾಸಣಾ ಮತ್ತು ದುರಸ್ತಿಯನ್ನು ಮಾಡಲಾಗುವುದು. ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸಲಾಗುವುದಿಲ್ಲ.

ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ

ಮೈಸೂರು,ಜ.24–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ ವಿಭಾಗದ ವತಿಯಿಂದ ಜ.27ರಿಂದ 31ರವರೆಗೆ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ ಆಯೋಜಿಸಿದೆ. ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾಸಣಾ ಮತ್ತು ದುರಸ್ತಿ ಮಾಡಿಸಬಹುದು. ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿ ಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕ ವಿಧಿಸಲಾಗುವುದಿಲ್ಲ. ಶಿಬಿರ ಉದ್ಘಾಟನಾ ಸಮಾರಂಭ ಸೋಮವಾರ ಬೆಳಿಗ್ಗೆ 9.30 ಗಂಟೆಗೆ ನಡೆಯಲಿದ್ದು, ಮುಖ್ಯ ಅತಿಥಿಯಾಗಿ ಎಎಸ್‌ಪಿ ಪಿ.ವಿ.ಸ್ನೇಹಾ, ಆಯಿಷ್‌ನ ಜಿಲ್ಲಾ ಅಧಿಕಾರಿ ಡಾ.ಸೀತಾಲಕ್ಷ್ಮಿ ಆಗಮಿಸುವರು. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಅಧ್ಯಕ್ಷತೆ ವಹಿಸಲಿದ್ದಾರೆ.

ಆರೋಗ್ಯ ಹದಗೆಡಲು ಆಹಾರವೇ ಕಾರಣ

• ಆಯುಷ್ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸೀತಾಲಕ್ಷ್ಮಿ

ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ(ಆಯುಷ್) ಸಂಸ್ಥೆಯಲ್ಲಿ ಸೋಮವಾರ ನಡೆದ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಆಯುಷ್ ಮೈಸೂರು ವಿಭಾಗದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಸೀತಾಲಕ್ಷ್ಮಿ ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕಿ ಡಾ. ಎಂ. ಪುಷ್ಪವತಿ, ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಎನ್. ಮನೋಹರ್ ಇತರರು ಇದ್ದರು.

ಮೈಸೂರು: ಮನುಷ್ಯರ ಆರೋಗ್ಯದಲ್ಲಿ ಏರು-ಪೇರು ಉಂಟಾಗಲು ನಾವು ಸೇವಿಸುವ ಆಹಾರ ಮತ್ತು ವಾತಾವರಣ ದಲ್ಲಿನ ಅಂಶಗಳೇ ಕಾರಣ ಎಂದು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಮೈಸೂರು ವಿಭಾಗದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಸೀತಾಲಕ್ಷ್ಮಿ ಅಭಿಪ್ರಾಯ ಪಟ್ಟರು.

ನಗರದ ಬೋಗಾದಿ ರಸ್ತೆಯಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ(ಆಯುಷ್)ಯ ಆವರಣದಲ್ಲಿ ಸಂಸ್ಥೆ ವತಿಯಿಂದ ಆಯೋಜಿಸಿರುವ ಐದು ದಿನಗಳ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೊದಲು ನಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಅತ್ಯವಶ್ಯಕವಾಗಿದೆ. ಪೋಷಕರು ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳ ಜತೆಗೆ ಹಾಲು, ವಿವಿಧ ರೀತಿಯ ಹಣ್ಣುಗಳನ್ನು ನೀಡುವ ಮೂಲಕ ಮಕ್ಕಳ ಆರೋಗ್ಯವನ್ನು ವೃದ್ಧಿಸಲು ಮುಂದಾಗಬೇಕೆಂದು ಸಲಹೆ ನೀಡಿದರು.

ಯುವಜನತೆ ಹಾಗೂ ವಯಸ್ಸಾದವರು ಆಯಾ ಕಾಲಕ್ಕನುಗುಣವಾಗಿ ಆಹಾರ ಪದಾರ್ಥಗಳು, ಹಣ್ಣುಗಳನ್ನು ಸೇವಿಸುವುದು ಉತ್ತಮ. ಮನುಷ್ಯರಲ್ಲಿ ಆರೋಗ್ಯ ಕೆಡಲು ಇಂದು ನಾವು ಸೇವಿಸುವ ಆಹಾರ, ಕೆಲಸದ ಒತ್ತಡ ಹಾಗೂ ವಾತಾವರಣ ಪ್ರಮುಖ ಕಾರಣವಾಗಿದೆ. ಹೀಗೆ ಯಾವುದೇ ಮನುಷ್ಯರ ಆರೋಗ್ಯ ಕೆಟ್ಟರೂ ವಿವಿಧ ಕಾಯಿಲೆಗಳು ಕಾಡತೊಡಗುತ್ತವೆ. ಅವುಗಳಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಕಂಡು ಬರುವ ಶ್ರವಣ ದೋ, ಮಾತು ಬಾರದಿರುವಿಕೆ ಪ್ರಮುಖವಾದವುಗಳಾಗಿವೆ. ಇವುಗಳನ್ನು ಉದಾಸೀನ ಮಾಡಿದಲ್ಲಿ ಮುಂದೆ ಭೀಕರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಣ್ಣ ಮಕ್ಕಳಲ್ಲಿ ಕಂಡು ಬರುವ ಶ್ರವಣದೋ ಮತ್ತು ಮಾತು ಬಾರದಿರುವಿಕೆ ಸಮಸ್ಯೆಗಳಿಗೆ ಆಯುಷ್ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ನನ್ನ ಮಗನೂ ಸಹ ಶ್ರವಣ ಆಕೊಡಿಸಿದ ನಂತರದ 3 ದಿನಗಳೊಳಗಾಗಿ ಆತ ಎಲ್ಲ ಮಕ್ಕಳಂತೆ ಖುಷಿಯಿಂದ ಇದ್ದಾನೆ. ಇಲ್ಲಿ ವರ್ಷದಿಂದ ವರ್ಷಕ್ಕೆ ಚಿಕಿತ್ಸೆ ಪಡೆಯುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಈ ಸಂಸ್ಥೆಯ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಂತಿದೆ. ಮಕ್ಕಳಲ್ಲಿ ಶ್ರವಣದೋಷ ಅಥವಾ ಮಾತು ಬಾರದಿರುವ ಸಮಸ್ಯೆ ಕಂಡು ಬಂದರೆ ಕೂಡಲೇ ಪೋಷಕರು ಈ ಸಂಸ್ಥೆಗೆ ಬಂದು ತಮ್ಮ ಮಕ್ಕಳನ್ನು ಕಾಡುತ್ತಿರುವ ಸಮಸ್ಯೆಗಳಿಂದ ಮುಕ್ತಿ ಹೊಂದುವಂತೆ ತಿಳಿಸಿದರು. ಶಿಬಿರದ ಸಂಚಾಲಕರಾಗಿದ್ದ ಸಂಸ್ಥೆಯ ಎಲೆಕ್ಟ್ರಾನಿಕಲ್ ವಿಭಾಗದ ಮುಖ್ಯಸ್ಥ ಎಸ್.ಆರ್. ಶ್ರೀನಿವಾಸ್ ಮಾತನಾಡಿ, ಶ್ರವಣದೋಷವುಳ್ಳವರಿಗೆ ಅತ್ಯುತ್ತಮ ಗುಣಮಟ್ಟದ ಶ್ರವಣ ಸಾಧನಗಳು ಈ ಸಂಸ್ಥೆಯಲ್ಲಿ ಲಭ್ಯವಿದೆ. ಇವುಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಧ್ವನಿ ಗ್ರಹಿಕೆಯಲ್ಲಿ ತೀವ್ರತೆಯನ್ನು ಹೊಂದಿದೆ. ಇವುಗಳ ಬೆಲೆ ತಂತ್ರಜ್ಞಾನ, ಗಾತ್ರ ಮತ್ತು ತೀವ್ರತೆಯ ಮೇಲೆ ಅವಲಂಬಿಸಿದ್ದು ಸರಿಸುಮಾರು ಕನಿಷ್ಠ 6 ಸಾವಿರ ರೂ.ಗಳಿಂದ 1 ಲಕ್ಷರೂ.ಗಳವರೆಗೆ ಗ್ರಾಹಕರಿಗೆ ಲಭ್ಯವಿರುತ್ತವೆ. ಸಮಾಜದಲ್ಲಿ ದುರ್ಬಲ ವರ್ಗದವರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತವಾಗಿ ಶ್ರವಣಸಾಧನಗಳನ್ನು ವಿತರಿಸಲಾಗುವುದು. ಇದಕ್ಕೆ ಅಗತ್ಯ ದಾಖಲಾತಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ನಮ್ಮ ಸಂಸ್ಥೆಯಲ್ಲಿ ಖರೀದಿಸಿದ ಶ್ರವಣ ದೋಷ ಯಂತ್ರಗಳಲ್ಲಿ ಏನಾದರೂ ಸಮಸ್ಯೆಗಳು ಕಂಡು ಬಂದಲ್ಲಿ ಅವುಗಳನ್ನು ಈ ಸಂಸ್ಥೆಯಲ್ಲಿರುವ ಇಂಜಿನಿಯರಿಂಗ್ ವಿಭಾಗಕ್ಕೆ ತಂದು ದುರಸ್ತಿ ಮಾಡಿಸಿಕೊಳ್ಳಬಹುದಾಗಿದೆ. ಬಿಡಿ ಭಾಗಗಳನ್ನು ಹೊರತುಪಡಿಸಿ ಸೇವಾಶುಲ್ಕ 300 ರಿಂದ 500 ರೂ.ಗಳನ್ನು ನೀಡಬೇಕಾಗಿರುತ್ತದೆ. ದೋಷವುಳ್ಳಯಂತ್ರಗಳನ್ನು 15ದಿನದಲ್ಲಿ ದುರಸ್ತಿ ಮಾಡಿ ಕೊಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಆಯುಷ್ ನಿರ್ದೇಶಕಿ ಡಾ. ಎಂ.ಪುಷ್ಪವತಿ, ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಎನ್.ಮನೋಹರ್, ಸಿಬ್ಬಂದಿ ಸೇರಿದಂತೆ 200ಕ್ಕೂ ಹೆಚ್ಚು ಶ್ರವಣದೋಷವುಳ್ಳ ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.

27ಆಯಿಷ್‌ನಲ್ಲಿ ಶ್ರವಣ ಸಾಧನಗಳ ದುರಸ್ತಿ ಶಿಬಿರ

ಮೈಸೂರು: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಜ.27 ರಿಂದ 31 ರವರೆಗೆ ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾಸಣೆ ಮತ್ತು ದುರಸ್ತಿಯನ್ನು ಮಾಡಿಸಬಹುದಾಗಿದ್ದು, ದುರಸ್ತಿಗಾಗಿ ಯಾವುದೇ ವೆಚ್ಚವನ್ನು ವಿಧಿಸಲಾಗುವುದಿಲ್ಲ. ಶ್ರವಣ ಸಾಧನದ ರಿಸೀವರ್, ಮೈಕ್ರೊಫೋನ್, ಆಂಪ್ಲಿಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸಲಾಗುವುದಿಲ್ಲ. ಈ ಶಿಬಿರವನ್ನು ಜ.27ರ ಬೆಳಗ್ಗೆ 9.30ಕ್ಕೆ ಹೆಚ್ಚುವರಿ ಎಸ್ಪಿ ಪಿ.ವಿ. ಸ್ನೇಹಾ, ಆಯುಷ್ ಜಿಲ್ಲಾ ಅಧಿಕಾರಿ ಡಾ. ಸೀತಾಲಕ್ಷ್ಮಿ ಉದ್ಘಾಟಿಸುವರು. ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಅಧ್ಯಕ್ಷತೆ ವಹಿಸುವರು. ಫಲಾನುಭವಿಗಳು ಈ ಶಿಬಿರದ ಪ್ರಯೋಜನವನ್ನು ಹೆಚ್ಚಿನ ರೀತಿಯಲ್ಲಿ ಪಡೆದುಕೊಳ್ಳಲು ಕೋರಲಾಗಿದೆ.

ವಾಕ್ ಶ್ರವಣ ಸಂಸ್ಥೆಯಲಿ ಶ್ರವಣ ಯಂತ್ರ ದುರಸ್ತಿ ಶಿಬಿರ ಆರಂಭ

ಜಿಲ್ಲಾ ಆಯುಷ್ ನಿರ್ದೇಶಕಿ ಡಾ. ಸೀತಾಲಕ್ಷ್ಮೀಯವರಿಂದ ಚಾಲನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ವತಿಯಿಂದ ಪ್ರತಿ ವರ್ಷದಂತೆ ಈ ಸಲವೂ ಐದು ದಿನಗಳ ಶ್ರವಣ ಯಂತ್ರ ದುರಸ್ತಿ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ಆಯುಷ್ ನಿರ್ದೇಶಕಿ ಡಾ. ಸೀತಾಲಕ್ಷ್ಮೀ ಚಾಲನೆ ನೀಡಿದರು. ಆಯಿಷ್‌ನ ಎಲೆಕ್ಟ್ರಾನಿಕ್ ವಿಭಾಗದಿಂದ ಜ. 27 ರಿಂದ 31ರವರೆಗೆ ಶಿಬಿರ ಆಯೋಜಿಸಿದ್ದು, ಈ ಐದು ದಿನಗಳ ಕಾಲ ಸುಮಾರು 650 ಯಂತ್ರಗಳನ್ನು ರಿಪೇರಿ ಮಾಡಿಕೊಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ ವಿವಿಧ ಕಂಪನಿಗಳಿಂದ ನುರಿತ ತಜ್ಞರು ಆಗಮಿಸಿದ್ದರು. ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಉಚಿತವಾಗಿ ರಿಪೇರಿ ಮಾಡಿಕೊಡುವುದು ಶಿಬಿರದ ಉದ್ದೇಶವಾಗಿದೆ. ಶ್ರವಣ ಯಂತ್ರಗಳನ್ನು ಪೂರೈಸುತ್ತಿರುವ ಸಂಸ್ಥೆಗಳಾದ ಆರ್ಟಿಕಾನ್, ಆ್ಯಂಪ್ಲಿಫೋನ್, ಫೋನ್ಯಾಕ್, ಸಿಂಟ್ರಾನ್, ವೈಡೆಕ್ಸ್, ಡೇನಾವಾರ್ಟ್ಸ್ ಮತ್ತಿತರ ಕಂಪನಿಗಳ ತಜ್ಞರು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಈ ಹಿಂದೆ ರಿಪೇರಿಗೆ ಹೊರಗೆ ಕಳುಹಿಸಬೇಕಿತ್ತು. ಅದಕ್ಕಾಗಿ ಸುಮಾರು 10 ರಿಂದ 15 ದಿನಗಳ ಕಾಲವಕಾಶವೂ ಬೇಕಾಗುತ್ತಿತ್ತು. ಇದನ್ನರಿತ ಆಯಿಷ್ ಹಲವು ವರ್ಷಗಳಿಂದ ಸಂಸ್ಥೆಯ ಆವರಣದಲ್ಲೆ ದುರಸ್ತಿ ಶಿಬಿರ ಆಯೋಜಿಸಿಕೊಂಡು ಬರುತ್ತಿದೆ. ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪಾವತಿ, ಸಂಯೋಜಕ ಎಸ್.ಆರ್. ಶ್ರೀನಿವಾಸ, ಮನೋಹರ್ ಇದ್ದರು.



ಆಯುಷ್‌ನಲ್ಲಿ ಆರಂಭವಾದ ಶ್ರವಣ ಯಂತ್ರ ದುರಸ್ತಿ ಶಿಬಿರದಲ್ಲಿ ಆಯುಷ್ ನಿರ್ದೇಶಕಿ ಡಾ. ಸೀತಾಲಕ್ಷ್ಮಿ ಮಾತನಾಡಿದರು. ಡಾ.ಎಂ. ಪುಷ್ಪಾವತಿ, ಎಸ್.ಆರ್. ಶ್ರೀನಿವಾಸ್, ಎನ್. ಮನೋಹರ್ ಇದ್ದಾರೆ.

ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ

ಹಾಸನ: ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಎಲೆಕ್ಟ್ರಾನಿಕ್ಸ್ ವಿಭಾಗವು ಜ.27 ರಿಂದ ಜ.31 ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಆಯೋಜಿಸಲಾಗಿದೆ.

ಜ.27ರ ಬೆಳಿಗ್ಗೆ 9:30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಮೈಸೂರು ಜಿಲ್ಲಾ ಆಯುಷ್ ಅಧಿಕಾರಿ ಸೀತಾ ಲಕ್ಷ್ಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. – ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮೈಸೂರು ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸ್ನೇಹಾ ಪಿ.ವಿ. ಭಾಗವಹಿಸಲಿದ್ದಾರೆ. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾಸಣೆ ಮತ್ತು ದುರಸ್ತಿಯನ್ನು ಮಾಡಿಸಬುದಾಗಿದ್ದು, ದುರಸ್ತಿಗಾಗಿ ಯಾವುದೇ ವೆಚ್ಚವನ್ನು ವಿಧಿಸಲಾಗುವುದಿಲ್ಲ, ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿ ಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸಲಾಗುವುದಿಲ್ಲ ಹಾಗಾಗಿ ಫಲಾನುಭವಿಗಳು ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಜ.27ಕ್ಕೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ

ಮೈಸೂರು: ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ ಭಾಗದ ವತಿಂದ ಜನವರಿ 27ರಿಂದ 31ರವರೆಗೆ 5 ದಿನಗಳ ಕಾಲ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯ ವರೆಗೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾಸಣಾ ಮತ್ತು ದುರಸ್ತಿಯನ್ನು ಮಾಡಿಸಬಹುದಾಗಿದೆ. ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸಲಾಗುವುದಿಲ್ಲ. ಶಿಬಿರ ಉದ್ಘಾಟನಾ ಸಮಾರಂಭವು ಜನವರಿ 27ರ ಸೋಮವಾರ ಬೆಳಿಗ್ಗೆ 9.30ಗಂಟೆಗೆ ಹ್ಮಕೊಳ್ಳಲಾಗಿದ್ದು, ಮುಖ್ಯ ಅಥಿತಿ ಯಾಗಿ ಮೈಸೂರಿನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪಿ.ಸ್ನೇಹಾ, ಆಯೂಷ್‌ನ ಡಾ.ಸೀತಾ ಲಕ್ಷ್ಮೀ ಹಾಗೂ ಮೈಸೂರು ಜಿಲ್ಲಾಧಿಕಾರಿಯವರು ಆಗುಸುವರು.

ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ ಉದ್ಘಾಟನೆ | ಜಿಲ್ಲಾ ಆರೋಗ್ಯಾಧಿಕಾರಿ ಡಾ. ಸೀತಾಲಕ್ಷ್ಮಿ ಅಭಿಮತ

ಆಹಾರ ವ್ಯತ್ಯಯದಿಂದ ಆರೋಗ್ಯದ ಮೇಲೆ ಪರಿಣಾಮ

ಮೈಸೂರು: ಪ್ರಸ್ತುತ ದಿನಗಳಲ್ಲಿ ಮನುಷ್ಯರ ಆರೋಗ್ಯದಲ್ಲಿ ಏರು ಪೇರು ಉಂಟಾಗಲು ನಿತ್ಯವೂ ಸೇವಿಸುವ ಆಹಾರ ಮತ್ತು ಬದಲಾಗಿರುವ ವಾತಾವರಣದಲ್ಲಿನ ಹಲವು ಅಂಶಗಳೇ ಪ್ರಮುಖ ಕಾರಣ ಎಂದು ಅಖಿಲಭಾರತ ವಾಕ್ ಶ್ರವಣ ಸಂಸ್ಥೆಯ ಮೈಸೂರು ವಿಭಾಗದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಸೀತಾಲಕ್ಷ್ಮಿ ತಿಳಿಸಿದರು.

ಸೋಮವಾರ ನಗರದ ಜೋಗಾದಿ ರಸ್ತೆಯಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ವತಿಯಿಂದ ಇಂದಿನಿಂದ ಐದು ದಿನಗಳವರೆಗೆ ಆಯೋಜಿಸಿರುವ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ವಿಶಿಷ್ಟ ಚೇತನ ಮಕ್ಕಳೊಂದಿಗೆ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯರಲ್ಲಿ ಆರೋಗ್ಯ ಕೆಡಲು ಇಂದು ನಾವು ಸೇವಿಸುವ ಆಹಾರ, ಕೆಲಸದಲ್ಲಿನ ಒತ್ತಡ ಹಾಗೂ ವಾತಾವರಣಗಳು ಪ್ರಮುಖ ಕಾರಣವಾಗಿವೆ, ಹೀಗೆ ಯಾವುದೇ ಮನುಷ್ಯರೋಗ್ಯ ಕೆಟ್ಟರೂ ವಿವಿಧಕಾಯಿಲೆಗಳು ಕಾಡತೊಡಗುತ್ತವೆ. ಅವುಗಳಲ್ಲಿ ಮುಖ್ಯವಾಗಿ

ಮಕ್ಕಳಲ್ಲಿ ಕಂಡು ಬರುವ ಶ್ರವಣ ದೋಷ, ಮಾತು ಬಾರದಿರುವಿಕೆ ಪ್ರಮುಖವಾದವುಗಳಾಗಿವೆ. ಇವುಗಳನ್ನು ಉದಾಸೀನ ಮಾಡಿದಲ್ಲಿ ಮುಂದೆ ಭೀಕರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೊದಲು ನಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಅತ್ಯವಶ್ಯ. ಈ ದಿಸೆಯಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳೊಂದಿಗೆ ಹಾಲು, ವಿವಿಧರೀತಿಯ ಹಣ್ಣುಗಳನ್ನು ನೀಡುವುದರ ಮೂಲಕ ತಮ್ಮ ಮಕ್ಕಳ ಆರೋಗ್ಯವನ್ನು ವೃದ್ಧಿಸಲು ಮುಂದಾಗಬೇಕೆಂದು ಸಲಹೆ ನೀಡಿದರು. ಯುವಜನತೆ ಹಾಗೂ ವಯಸ್ಸಾದವರು ಆಯಾ ಕಾಲಕ್ಕನುಗುಣವಾಗಿ ಆಹಾರ ಪದಾರ್ಥಗಳು, ಹಣ್ಣುಗಳನ್ನು ಸೇವಿಸುವುದು ಉತ್ತಮ ಎಂದು ಸಲಹೆ ನೀಡಿದರು.

ಸಣ್ಣ ಮಕ್ಕಳಲ್ಲಿ ಕಂಡು ಬರುವ ಶ್ರವಣದೋಷ ಮತ್ತು ಮಾತು ಬಾರದಿರುವಿಕೆ ಸಮಸ್ಯೆಗಳಿಗೆ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇಲ್ಲಿ ವರ್ಷದಿಂದ ವರ್ಷಕ್ಕೆ ಚಿಕಿತ್ಸೆ ಪಡೆಯುವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಈ ಸಂಸ್ಥೆಯ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಂತಿದೆ. ಯಾರದೇ ಮನೆಯಲ್ಲಿ ಶ್ರವಣ ದೋಷವುಳ್ಳ ಹಾಗೂ ಮಾತ ಬಾರದಿರುವ ಮಕ್ಕಳು ಕಂಡು ಬಂದರೆ ಕೂಡಲೇ ಪೋಷಕರು ಈ ಸಂಸ್ಥೆಗೆ ಬಂದು ತಮ್ಮ ಮಕ್ಕಳನ್ನು ಕಾಡುತ್ತಿರುವ ಸಮಸ್ಯೆಗಳಿಂದ ಮುಕ್ತಿ ಹೊಂದುವಂತೆ ಕರೆ ನೀಡಿದರು.

ಶಿಬಿರದ ಸಂಚಾಲಕರಾಗಿದ್ದ ಸಂಸ್ಥೆಯ ಎಲೆಕ್ಟ್ರಾನಿಕಲ್ ವಿಭಾಗದ ಮುಖ್ಯಸ್ಥ ಎಸ್.ಆರ್.ಶ್ರೀನಿವಾಸ್ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಆ.ಭಾ.ವಾ.ಶ್ರ ಸಂಸ್ಥೆಯ ನಿರ್ದೇಶಕಿ ಡಾ.ಎಂ. ಪುಷ್ಪವತಿ ವಹಿಸಿದ್ದರು. ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಎನ್. ಮನೋಹರ್, ಸಿಬ್ಬಂದಿವರ್ಗದವರು- ಸೇರಿದಂತೆ 200ಕ್ಕೂ ಹೆಚ್ಚು ಶ್ರವಣ ದೋಷವುಳ್ಳ ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.

27ರಿಂದ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ

ಮೈಸೂರು,ಜ.24-ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ ವಿಭಾಗದ ವತಿಯಿಂದ ಜ.27ರಿಂದ 31ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ'ಶ್ರವಣಸಾಧನಗಳ ಉಚಿತ ದುರಸ್ತಿ ಶಿಬಿರ'ವನ್ನು ಆಯೋಜಿಸಲಾಗಿದೆ.

ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾಸಣಾ ಮತ್ತು ದುರಸ್ತಿಯನ್ನು ಮಾಡಿಸಬಹುದಾಗಿದೆ. ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸಲಾಗುವುದಿಲ್ಲ.

ಜ.27ರಂದು ಬೆಳಿಗ್ಗೆ 9.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪಿ.ವಿ.ಸ್ನೇಹಾ, ಆಯಿಷ್‌ನ ಡಾ.ಸೀತಾ ಲಕ್ಷ್ಮೀ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ.ಎಂ.ಪುಷ್ಪಾವತಿ ಭಾಗವಹಿಸಲಿದ್ದಾರೆ.

ಶ್ರವಣ ಸಾಧನ ದುರಸ್ತಿ ಶಿಬಿರ

ಮೈಸೂರು: ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಎಲೆಕ್ಟ್ರಾನಿಕ್ ವಿಭಾಗದಿಂದ ಜ. 27ರಿಂದ 31ರವರೆಗೆ 5 ದಿನಗಳ ಕಾಲ ಬೆಳಿಗ್ಗೆ 10 ರಿಂದ 4 ಗಂಟೆಯ ವರೆಗೆ ''ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ''ವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತತಪಾಸಣಾ ಮತ್ತು ದುರಸ್ತಿಯನ್ನು ಮಾಡಿಸಬಹುದಾಗಿದೆ. ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇರೀತಿಯ ಶುಲ್ಕವನ್ನು ವಿಧಿಸಲಾಗುವುದಿಲ್ಲ.ಶಿಬಿರ ಉದ್ಘಾಟನಾ ಸಮಾರಂಭವು ಜ.27 ರಂದು ಬೆಳಗ್ಗೆ 9.30 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ಅಥಿತಿಯಾಗಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪಿ.ವಿ. ಸ್ನೇಹಾ, ಆಯೂಷ್‌ನಜಿಲ್ಲಾಅಧಿಕಾರಿ ಡಾ.ಸೀತಾ ಲಕ್ಷ್ಮೀ ಅವರು ಆಗಮಿಸುವರು. ಅಧ್ಯಕ್ಷತೆಯನ್ನು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕಿ ಡಾ. ಎಂ.ಪುಷ್ಪಾವತಿ ವಹಿಸಲಿದ್ದಾರೆ.

ಆಹಾರ ಪದ್ಧತಿಯೇ ಅನಾರೋಗ್ಯಕ್ಕೆ ಕಾರಣ

ಜಿಲ್ಲೆಯಲ್ಲಿ ಆಯುಷ್‌ನಲ್ಲಿ ಸೋಮವಾರ ಆಯೋಜಿಸಿದ್ದ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಗಣ್ಯರು, ಮಕ್ಕಳು ಸಾಮೂಹಿಕವಾಗಿ ಉದ್ಘಾಟಿಸಿದರು. ಡಾ. ಸೀತಾ ಲಕ್ಷ್ಮೀ, ಎಸ್.ಆರ್.ಶ್ರೀನಿವಾಸ್, ಡಾ.ಎಂ.ಪುಷ್ಪಾವತಿ ಪಾಲ್ಗೊಂಡಿದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ಆಹಾರ ಪದ್ಧತಿ, ಕೆಲಸದ ಅತಿಯಾದ ಒತ್ತಡ ಹಾಗೂ ಹದಗೆಡುತ್ತಿರುವ ವಾತಾವರಣ ಆನಾರೋಗ್ಯಕ್ಕೆ ಪ್ರಮುಖ ಕಾರಣವಾಗಿದೆ ಎಂದು ಆಯುಷ್ ಜಿಲ್ಲಾ ಮಟ್ಟದ ಅಧಿಕಾರಿ ಡಾ.ಸೀತಾಲಕ್ಷ್ಮೀ ಹೇಳಿದರು.

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಎಲೆಕ್ಟಾನಿಕ್ ವಿಭಾಗದಲ್ಲಿ ಸೋಮವಾರ ಆಯೋಜಿಸಿದ್ದ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರೋಗ್ಯ ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ. ಈ ದಿನೆಯಲ್ಲಿ ಪಾಲಕರು ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳೊಂದಿಗೆ ಹಾಲು, ವಿವಿಧ ರೀತಿಯ ಹಣ್ಣು ನೀಡಿ ಆರೋಗ್ಯ ವೃದ್ಧಿಸಲು ಮುಂದಾಗಬೇಕು ಎಂದರು.

ಆರೋಗ್ಯ ಹದಗೆಟ್ಟರೆ ವಿವಿಧ ಕಾಯಿಲೆಗಳು ಕಾಡತೊಡಗುತ್ತವೆ. ಅವುಗಳಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಕಂಡು ಬರುವ ಶ್ರವಣ, ವಾಕ್ ದೋಷ ಪ್ರಮುಖವಾಗಿವೆ. ಈ ಕುರಿತು ಉದಾಸೀನ ಮಾಡಿದಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಶ್ರವಣ, ವಾಕ್ ದೋಷದ ಸಮಸ್ಯೆಗೆ ಆಯುಷ್‌ನಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ನನ್ನ ಮಗನೂ ಸಹ ಶ್ರವಣ ದೋಷದಿಂದ ಬಳಲುತ್ತಿದ್ದು, ಇಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಆತ ಎಲ್ಲ ಮಕ್ಕಳಂತೆ ಖುಷಿಯಿಂದ ಇದ್ದಾನೆ. ಇಲ್ಲಿ ಚಿಕಿತ್ಸೆ ಪಡೆಯುವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಸಂಸ್ಥೆಯ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ಸಂಸ್ಥೆಯ ಎಲೆಕ್ಟಾನಿಕಲ್ ವಿಭಾಗದ ಮುಖ್ಯಸ್ಥ ಎಸ್. ಆರ್.ಶ್ರೀನಿವಾಸ್ ಮಾತನಾಡಿ, ಶ್ರವಣ ದೋಷವುಳ್ಳವರಿಗೆ ಗುಣಮಟ್ಟದ ಶ್ರವಣ ಸಾಧನಗಳು ನಮ್ಮ ಸಂಸ್ಥೆಯಲ್ಲಿ ಲಭ್ಯವಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತವಾಗಿ ಈ ಸಾಧನಗಳನ್ನು ವಿತರಿಸಲಾಗುವುದು ಎಂದರು. ಸಂಸ್ಥೆ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಪಾಲ್ಗೊಂಡಿದ್ದರು.

ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ

ಮೈಸೂರು : ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಎಲೆಕ್ಟ್ರಾನಿಕ್ ವಿಭಾಗದ ವತಿಯಿಂದ ಜನವರಿ 27ರಿಂದ 31ರವರೆಗೆ 5 ದಿನಗಳ ಕಾಲ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಶ್ರವಣ ಸಾಧನಗಳ ಉಚಿತ ತಪಾ ಸಣಾ ಮತ್ತು ದುರಸ್ತಿ ಮಾಡಿಸಬಹುದಾಗಿದೆ. ಶ್ರವಣ ಸಾಧನದ ರಿಸೀವರ್, ಮೈಕ್ರೋಫೋನ್, ಆಂಪ್ಲಿ ಫೈಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಬಿಡಿ ಭಾಗಗಳಿಗೆ ಯಾವುದೇ ರೀತಿಯ ಶುಲ್ಕ ವಿಧಿಸಲಾಗುವುದಿಲ್ಲ. ಶಿಬಿರ ಉದ್ಘಾಟನಾ ಸಮಾರಂಭವು ಜನವರಿ 27ರ ಸೋಮವಾರ ಬೆಳಿಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದ್ದು ಮುಖ್ಯ ಅತಿಥಿಯಾಗಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪಿ.ವಿ.ಸ್ನೇಹಾ, ಆಯೂಷ್‌ನ ನಿರ್ದೇಶಕಿ ಡಾ.ಸೀತಾ ಲಕ್ಷ್ಮೀ, ಜಿಲ್ಲಾಧಿಕಾರಿ ಅಭಿರಾಮ್ ಜಿ.ಶಂಕರ್ ಆಗಮಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇ ಶಕರಾದ ಡಾ. ಎಂ.ಪುಷ್ಪಾವತಿ ವಹಿ ಸಲಿ ದ್ದಾರೆ ಎಂದು ಪ್ರಕಟಣೆಯಲ್ಲಿತಿಳಿಸಲಾಗಿದೆ.

ಚಿಟ್ಟೆ ಪಕ್ಷಿಗಳ ಕುರಿತು ಉಪನ್ಯಾಸ:ನಗರದ ಶ್ರೀ ಜಾಮರಾಜೇಂದ್ರ ಮೃಗಾಲಯದಲ್ಲಿ ಜ.26 ರಂದು ಬೆಳಿಗ್ಗೆ 10ಕ್ಕೆ ಪಕ್ಷಿ ಹಾಗೂ ಚಿಟ್ಟೆ ಕುರಿತು ಉಪನ್ಯಾಸ ಆಯೋಜಿಸಲಾಗಿದೆ.

ಬೆಳಗಾವಿ ಆರಣ್ಯ ವಿಭಾಗದ ಆರಣ್ಯ ರಕ್ಷಕ ಆನಂದ್ ಮತ್ತು ಮಹಾವೀರ್ ಅವರು ಚಿಟ್ಟೆ ಕುರಿತು ಹಾಗೂ ಬಿ.ಸಹನಾ ಅವರು ಪಕ್ಷಿಗಳ ಕುರಿತು ಮಾತನಾಡಲಿದ್ದಾರೆ.

ಆಸಕ್ತರು ಜ.26 ರೊಳಗೆ ನೋಂದಾಯಿಸಿಕೊಳ್ಳಬಹುದು. ಮೊ. 8171811007.

ಆರೋಗ್ಯಕ್ಕೆ ಆಹಾರವೇ ಮೂಲ

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಮೈಸೂರು ವಿಭಾಗದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸೀತಾಲಕ್ಷ್ಮೀ

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಆಯೋಜಿಸಿದ್ದ ಶ್ರವಣ ಸಾಧನಗಳ ಉಚಿತ ದುರಸ್ತಿ ಶಿಬಿರವನ್ನು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸೀತಾಲಕ್ಷ್ಮೀ ಉದ್ಘಾಟಿಸಿದರು. ಡಾ.ಎಂ.ಪುಷ್ಪಾವತಿ, ಎನ್.ಮನೋಹರ್ ಇದ್ದರು.

ದುಬಾರಿಯಿಂದ ಉಚಿತ ಸಾಧನ

ಶ್ರವಣ ದೋಷವುಳ್ಳವರಿಗೆ ಅಳವಡಿಸುವ ಶ್ರವಣ ಸಾಧನಗಳು ಉತ್ತಮ ಗುಣಮಟ್ಟದ್ದಾಗಿದ್ದು, ಪ್ರತಿಯೊಂದಕ್ಕೂ ಸಾವಿರಾರು ರೂ. ವೆಚ್ಚವಾಗುತ್ತದೆ. ಇದರಿಂದ ಬಡವರಿಗೆ ಇದು ಕೈಗೆಟುಕದ ವಸ್ತುವಾಗಿದೆ. ಆದರೆ ಇಲ್ಲಿ ಉಚಿತವಾಗಿ ಸಾಧನಗಳನ್ನು ಅಳವಡಿಸಲಾಗುತ್ತಿದೆ. ಒಂದು ಕಿವಿಗೆ ಸಾಧನ ಅಳವಡಿಸಲು ಸುಮಾರು 50 ಸಾವಿರ ರೂ. ವೆಚ್ಚವಾಗುತ್ತದೆ. ಎರಡು ಕಿವಿಗೆ ಅಳವಡಿಸಲು 1 ಲಕ್ಷ ರೂ. ಸಾಧನಗಳು ಬೇಕಾಗುತ್ತವೆ. ಇಂತಹ ದುಬಾರಿ ಸಾಧನಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದು ಡಾ.ಸೀತಾಲಕ್ಷ್ಮೀ ತಿಳಿಸಿದರು.

ಹಾಗೂ ಮಾತು ಬಾರದಿರುವ ಮಕ್ಕಳು ಕಂಡು ಬಂದರೆ ಕೂಡಲೇ ಪೋಷಕರು ಈ ಸಂಸ್ಥೆ ಬಂದು ತಮ್ಮ ಮಕ್ಕಳನ್ನು ಕಾಡುತ್ತಿರುವ ಸಮಸ್ಯೆಗಳ ಮುಕ್ತಿ ಹೊಂದುವಂತೆ ಕರೆ ನೀಡಿದರು.

ಶಿಬಿರದ ಸಂಚಾಲಕ, ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಎಸ್.ಆರ್.ಶ್ರೀನಿವಾಸ್ ಮಾತನಾಡಿ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆ.ಭಾ.ವಾ.ಶ್ರ ಸಂಸ್ಥೆಯ ನಿರ್ದೇಶಕಿ ಡಾ.ಎಂ. ಪುಷ್ಪವತಿ ವಹಿಸಿದ್ದರು. ಸಂಸ್ಥೆಯ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಎನ್. ಮನೋಹರ್, ಸಿಬ್ಬಂದಿವರ್ಗದವರು- ಸೇರಿದಂತೆ 200ಕ್ಕೂ ಹೆಚ್ಚು ಶ್ರವಣ ದೋಷವುಳ್ಳ ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.